

# ಮಾನವ ಹಕ್ಕುಗಳು ಮತ್ತು ಮಾನವ ಹಕ್ಕುಗಳ ಶಿಕ್ಷಣ ಮತ್ತು ಮಕ್ಕಳ ಹಕ್ಕುಗಳು

# (Human Rights & Human Rights Euducation and Child Rights)

## ಪೀಠಿಕೆ

ನಮ್ಮ ಸಂಸ್ಕೃತಿ ಹಾಗೂ ನಾಗರೀಕತೆಗೆ ಪ್ರಾಚೀನ ಹಾಗೂ ಆಧುನಿಕ ಮಾನವ ಚಿಂತನೆ ಕಟ್ಟಿರುವ ಅಮೂಲ್ಯ ಆಸ್ತಿ "ಮಾನವ ಹಕ್ಕುಗಳ ಪರಿಕಲ್ಪನೆ" ಮಾನವನ ಮೂಲಭೂತ ಹಕ್ಕುಗಳನ್ನು ಉಳಿಸಿ ಬೆಳೆಸುವ ಪ್ರಯತ್ನ ಎಲ್ಲಾ ಕಾಲದಲ್ಲೂ, ಎಲ್ಲಾ ಸಮಾಜದಲ್ಲೂ ನಡೆಯುತ್ತಲೇ ಬಂದಿದೆ. ಈ ಪ್ರಕ್ರಿಯೆಯಲ್ಲಿ ಹೊಸ ಹಕ್ಕುಗಳು ಮೂಡಿ ಬಂದಿವೆ.

ಚರಿತ್ರೆಯಲ್ಲಿನ ಎಲ್ಲ ಪ್ರಮುಖ ನಾಗರೀಕತೆಗಳು ಒಂದಲ್ಲ ಒಂದು ರೀತಿಯಲ್ಲಿ ಮಾನವ ಹಕ್ಕುಗಳನ್ನು ಕುರಿತು ಆಲೋಚಿಸಿವೆ, ಪ್ರತಿಕ್ರಿಯಿಸಿವೆ. ಆಧುನಿಕ ಸಮಾಜದಲ್ಲಿ ಎದ್ದು ಕಾಣುವ ಅಂಶ ಶೋಷಣೆ, ಜನಗಳನ್ನು ಶೋಷಿಸುವ ನೂರಾರು ಸಾವಿರಾರು ಘಟನೆಗಳನ್ನು ನಾವು ಪ್ರತಿನಿತ್ಯ ನೋಡುತ್ತೇವೆ, ಕೇಳುತ್ತೇವೆ, ಅತ್ತೆ–ಸೊಸೆಯವರ ಶೋಷಿಸುವುದು.ಹಿರಿಯರನ್ನು–ಕಿರಿಯರನ್ನು ಶೋಷಿಸುವುದು, ಅಧಿಕಾರಿಗಳು ನೌಕರರನ್ನು ಶೋಷಿಸುವುದು ನಮಗೆ ದಿನನಿತ್ಯದ ಸಂಗತಿ.

ಇಂತಹ ಸನ್ನಿವೇಶಗಳನ್ನು ನಿವಾರಿಸಲು, ತಮ್ಮ ಹಾಗೂ ಇತರರ ಹಕ್ಕುಗಳಿಗಾಗಿ ಹೋರಾಡುವಂತೆ ಮಾಡಲು ಮಕ್ಕಳಿಗೆ ಮಾನವ ಹಕ್ಕುಗಳ ಶಿಕ್ಷಣವನ್ನು ನೀಡಬೇಕಾಗಿದೆ.

ಹಕ್ಕುಗಳೆಂದರೆ:–ಸೌಲಭ್ಯಗಳು, ಸವಲತ್ತುಗಳು ಎಂದು ಅರ್ಥವಾಗುತ್ತದೆ.

## ಹಕ್ಕುಗಳ ಅರ್ಥ

"ಹಕ್ಕು ಎಂದರೆ ಸಮಾಜದಿಂದ ಮನ್ನಿಸಲ್ಪಟ್ಟ ಹಾಗೂ ದೃಢಪಡಿಸಲ್ಪಟ್ಟ ರಾಜ್ಯ ಶಾಸನದಿಂದ ಬೆಂಬಲಿಸಲ್ಪಟ್ಟ ವ್ಯಕ್ತಿಯೊಬ್ಬನ ಅಧಿಕಾರವೆನ್ನಬಹುದು."

"ಹಕ್ಕುಗಳೆಂದರೆ ಅದು ಅಧಿಕಾರವಾಗಿರದೇ ಅದೊಂದು ಅವಕಾಶವಾಗಿದೆ. ಮಾನವನು ವ್ಯಕ್ತಿಯೆಂಬ ನೆಲೆಯಲ್ಲಿ ಮಾನವನು ಹಕ್ಕುಗಳನ್ನು ಜನ್ಮತಃ ಪಡೆದಿರುತ್ತಾನೆ. ಹಕ್ಕುಗಳು ಕೊಡುವಂತಹದಲ್ಲ, ಸಹಜವಾಗಿ ಹಕ್ಕುಗಳನ್ನು ಪಡೆಯುವಂತಹದು. ಆದ್ದರಿಂದ ರಾಷ್ಟ್ರವು ಈ ಹಕ್ಕುಗಳನ್ನು ರಕ್ಷಣೆ ಮಾಡಬೇಕು.

ಪ್ರೊ.ಹೆರಾಲ್ಡ್ ಲಾಸ್ಕಿಯವರ ಪ್ರಕಾರ:– ಹಕ್ಕುಗಳೆಂದರೆ "ಜೀವನಕ್ಕೆ ಬೇಕಾಗಿರುವ ಅವಶ್ಯಕವಾದ ಅಂಶಗಳನ್ನೆ ಹಕ್ಕುಗಳೆಂದಿದ್ದಾರೆ."

## ಮಾನವ ಹಕ್ಕುಗಳ ಪರಿಕಲ್ಪನೆ

ಮಾನವ ಹಕ್ಕುಗಳ ಪರಿಕಲ್ಪನೆಯು ಇತ್ತೀಚಿನದಲ್ಲ. ಪ್ರಾಚೀನ ರೋಮ್–ಗ್ರೀಕ್ ನಾಗರಿಕತೆಗಳಲ್ಲಿ ಮಾನವ ಹಕ್ಕುಗಳ ಉಲ್ಲೇಖವಿದೆ. 1215ರ ಇಂಗ್ಲೆಂಡಿನ ಮ್ಯಾಗ್ನಕಾರ್ಟ, 1689ರ ಬಿಲ್ ಆಫ್ ರೈಟ್ಸ್ ಮತ್ತು ಟೌನ್ ಲಾರ್ಡನ ವಿಚಾರಧಾರೆಗಳು ಪರಿಕಲ್ಪನೆಯನ್ನು ಮೂಡಿಸಿವೆ. ಮಾನವ ಹಕ್ಕುಗಳನ್ನು ನೈಜವಾಗಿ ಅನ್ವಯಿಸಿಕೊಳ್ಳುವ ಮೊಟ್ಟಮೊದಲ ಪ್ರಯತ್ನ ಪ್ರಥಮ ಮಹಾಯುದ್ಧದ ನಂತರ ಲೀಘ್ ಆಫ್ ನೇಷನ್ ಪ್ರಯತ್ನದಲ್ಲಿ ನಡೆಯಿತು. 1945 ಜನವರಿ 6 ರಂದು ಅಮೇರಿಕಾದ ಅಧ್ಯಕ್ಷ ರೂಸ್ ವೆಲ್ಟ್ ಅವರು ಕಾಂಗ್ರೆಸ್‌ನ್ನು ಉದ್ದೇಶಿಸಿ ಮಾಡಿದ ಭಾಷಣ ಮಾನವನ ಹಕ್ಕುಗಳ ಬೆಳವಣಿಗೆಯಲ್ಲಿ ಮೈಲಿಗಲ್ಲಾಗಿದೆ. ಎರಡನೇ ಮಹಾಯುದ್ಧದ ಸಮಯದಲ್ಲಿ ನಡೆದ ಯಹೂದಿಯರ ಬರ್ಬರ ಹತ್ಯೆ, ಜಪಾನಿನ ಹಿರೋಶಿಮಾ–ನಾಗಸಾಕಿ ದುರಂತ ಮುಂತಾದವು ಜನರ ಜೀವಿಸುವ ಹಕ್ಕನ್ನು ದಮನ ಮಾಡಿದ ಭೀಕರತೆಯ ಪರಿಣಾಮವಾಗಿ ಮಾನವರ ಹಕ್ಕುಗಳ ಬಗ್ಗೆ ಜನರಲ್ಲಿ ಜಾಗೃತಿಯನ್ನುಂಟು ಮಾಡಿತು. ವಿಶ್ವದ ಮುತ್ಸದ್ದಿ ನಾಯಕರು ಮಾನವ ಹಕ್ಕುಗಳ ಸಂರಕ್ಷಣೆಗಾಗಿ ಚರ್ಚಿಸಲು ಸನ್ 1945 ರಲ್ಲಿ 51 ರಾಷ್ಟ್ರಗಳು ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಸಭೆ ಸೇರಿ ಚರ್ಚಿಸಿದ ನಂತರ ಮಾನವ ಹಕ್ಕುಗಳ ಆಯೋಗದ ಸ್ಥಾಪನೆಯನ್ನು ಘೋಷಿಸಲಾಯಿತು.

## ಮಾನವ ಹಕ್ಕುಗಳ ಅರ್ಥ

*“ವಿಶ್ವದ ಪ್ರತಿಯೊಬ್ಬ ಮಾನವನು ಯಾವುದೇ ಜಾತಿ, ಮತ, ವರ್ಣ, ಲಿಂಗ, ಭಾಷೆ, ವೈಚಾರಿಕತೆ, ವೈವಿಧ್ಯತೆ, ಧರ್ಮ, ಸಿರಿತನ, ಬಡತನ, ಸಾಮಾಜಿಕ ಸ್ಥಾನಮಾನ, ಸಿಧ್ಧಾಂತ, ದೇಶ–ಕೋಶಗಳ ಬೇಧ–ಭಾವ ಇಲ್ಲದ ದೈಹಿಕ, ಮಾನಸಿಕ, ಆರ್ಥಿಕ, ಸಾಂಸ್ಕೃತಿಕವಾಗಿ ಸಂತೃಪ್ತಿ ಸಂತೋಷದ ಜೀವನ ನಡೆಸುವಂತೆ ತೊಟ್ಟ ಸಂಕಲ್ಪವೇ” ಮಾನವ ಹಕ್ಕುಗಳು.

Human rights are generally defined as those rights, which are inherent in our nature, and without which, we cannot live as human beings.

- United Nation

*”ಮಾನವರೇ ಮಾನವರಿಗಾಗಿ ಒಪ್ಪಿಕೊಂಡ ಹಕ್ಕುಗಳು ಮಾನವ ಹಕ್ಕುಗಳಾಗಿವೆ.”

---

Human rights are supreme, inherent, and inalienable rights to life, dignity and self-development. It is the essence of these rights that makes man human.

-Philippine Commission on Human Right

- *“ಮಾನವನಾಗಿ ಹುಟ್ಟಿರುವ ಕಾರಣದಿಂದಲೇ ಒಬ್ಬ ವ್ಯಕ್ತಿಗೆ ಅವರ ಹುಟ್ಟಿನಿಂದಲೇ ಪ್ರಾಪ್ತವಾಗುವ ಹಕ್ಕುಗಳೇ” ಮಾನವ ಹಕ್ಕುಗಳು.

## 1. ಮಾನವ ಹಕ್ಕುಗಳ ಶಿಕ್ಷಣ

"ವಿದ್ಯಾರ್ಥಿಗಳಲ್ಲಿ ಮಾನವ ಹಕ್ಕುಗಳ ಬಗ್ಗೆ ಸ್ಪಷ್ಟ ಪರಿಕಲ್ಪನೆ, ಜಾಗೃತಿ ಮೂಡಿಸಿ ಗೌರವ ಭಾವನೆಯನ್ನು ಬೆಳೆಸುವ ಮತ್ತು ಸೂಕ್ತ ಸಂದರ್ಭದಲ್ಲಿ ಕಾರ್ಯಪ್ರವೃತ್ತರಾಗಲು ಅಗತ್ಯವಾದ ಕೌಶಲ್ಯಗಳನ್ನು ಬೆಳೆಸುವ ಶಿಕ್ಷಣವೇ ಮಾನವ ಹಕ್ಕುಗಳ ಶಿಕ್ಷಣವಾಗಿದೆ."

**("Education which gives awareness of human rights & develops skills, to involve the students regarding human rights.")**

"ಮಾನವ ಹಕ್ಕುಗಳ ಸಂರಕ್ಷಣೆಗಾಗಿ ಶ್ರಮಿಸುವ ಸಂಸ್ಥೆಗಳು ಮತ್ತು ಅವುಗಳ ಕಾರ್ಯವಿಧಾನದ ಬಗ್ಗೆ ಸ್ಪಷ್ಟ ಅರಿವು ಮೂಡಿಸುವ ಶಿಕ್ಷಣವೇ ಮಾನವ ಹಕ್ಕುಗಳ ಶಿಕ್ಷಣವಾಗಿದೆ."

1. **Produces changes in values and attitudes**
2. **Produces changes in behavior**
3. **Produces empowerment for social justice**
4. **Develops attitudes of solidarity across issues and nations**

## ಮಾನವ ಹಕ್ಕುಗಳ ಶಿಕ್ಷಣದ ಉದ್ಧೇಶಗಳು

- ಮಾನವ ಹಕ್ಕುಗಳು ಜಾಗತಿಕ ಘೋಷಣೆಯ ಉದ್ಧೇಶ, ಹಿನ್ನಲೆಯನ್ನು ಪರಿಚಯಿಸುವುದು.
- ಮಾನವ ಹಕ್ಕುಗಳ ಸಂರಕ್ಷಣೆ ಮಾಡುವ ಅಥವಾ ಉಲ್ಲಂಘನೆಯ ವಿರುದ್ಧ ಹೋರಾಡುವಂತಹ ಸಂಘಟನೆಗಳನ್ನು ಪರಿಚಯಿಸುವುದು.
- ಇತರರ ಹಕ್ಕುಗಳ ಬಗ್ಗೆ ಗೌರವ, ಪ್ರಶಂಸಾ ಮನೋಭಾವ, ಹಕ್ಕುಗಳು ಎಲ್ಲರಿಗೂ ಸಮಾನ ಎಂಬ ಭಾವನೆ ಮೂಡಿಸುವುದು.
- ಜನರಲ್ಲಿ ಮಾನವ ಹಕ್ಕುಗಳ ಬಗ್ಗೆ ಇರುವ ಪೂರ್ವಾಗ್ರಹಗಳನ್ನು ಗುರುತಿಸಿ ಅದರ ನಿವಾರಣೆಗೆ ಪ್ರಯತ್ನಿಸುವುದು.

## ಮಾನವ ಹಕ್ಕುಗಳ ಪ್ರಾಮುಖ್ಯತೆ

- ಹಕ್ಕುಗಳು ಮಾನವನಿಗೆ ಬದುಕುವ, ಮಾತನಾಡುವ, ಜೀವರಕ್ಷಣೆಗೆ ಅವಕಾಶ ಮಾಡಿಕೊಡುತ್ತದೆ.
- ಪ್ರತಿಯೊಬ್ಬರಿಗೂ ನಿರ್ಭಯವಾಗಿ ಜೀವಿಸುವ ಹಾಗೂ ವೈಯುಕ್ತಿಕ ಬದುಕಿಗೆ ಅವಕಾಶ ಮಾಡಿಕೊಡುತ್ತದೆ.
- ಕಾನೂನಿನ ಮುಂದೆ ಸಮತೆ ಮತ್ತು ಪೋಷಣೆಗೆ ಅವಕಾಶ ಮಾಡಿಕೊಡುತ್ತದೆ.
- ಪ್ರತಿಯೊಬ್ಬರಿಗೂ ತಮಗೆ ಇಷ್ಟವಾದ ವೃತ್ತಿ ಉದ್ಯೋಗಗಳಲ್ಲಿ ತೊಡಗುವ ಅವಕಾಶ ಕಲ್ಪಿಸಿಕೊಡುವುದು.
- ಬಡವ ಬಲ್ಲಿದ, ಸ್ತ್ರೀ ಪುರುಷ, ವಿದ್ಯಾವಂತ ಅವಿದ್ಯಾವಂತ ಎನ್ನದೇ ಸ್ವತಂತ್ರವಾಗಿ ಅನುಭವಿಸಲು ಅವಕಾಶ ಮಾಡಿಕೊಡುವದು.
- ಒಳ್ಳೆಯ ನಾಗರೀಕತ್ವದ ಬೆಳವಣಿಗೆಗೆ ಅವಕಾಶ ಮಾಡಿಕೊಡುತ್ತವೆ.
- ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿಗೆ ಹಾಗೂ ಬೆಳವಣಿಗೆಗೆ ಅವಕಾಶ ಮಾಡಿಕೊಡುತ್ತವೆ.

## ವಿಶ್ವ ಘೋಷಿತ ಮಾನವ ಹಕ್ಕುಗಳು
## (Universal Declaration of Human Rights)

- ಮಾನವನ ಹಕ್ಕುಗಳು ಮಾನವನ ಜೀವನಕ್ಕೆ ಅಗತ್ಯ. ಇವಿಲ್ಲದೇ ವ್ಯಕ್ತಿಯ ಜೀವನ ಅಪೂರ್ಣವೆನ್ನಬಹುದಾಗಿದೆ. ಮಾನವ ಹಕ್ಕುಗಳ ಕುರಿತು ಯುನೆಸ್ಕೊ ಸಾಮಾನ್ಯ ಸಭೆಯಲ್ಲಿ ಜಾಗತಿಕ ಮಾನವ ಹಕ್ಕುಗಳ ಘೋಷಣೆಯನ್ನು ಅಂಗೀಕರಿಸಲಾಯಿತು. ಇದು ಮಾನವ ಹಕ್ಕುಗಳ ಹೋರಾಟದಲ್ಲಿ ದಿಟ್ಟ ಹೆಜ್ಜೆ ಎನ್ನಬಹುದಾಗಿದೆ. ಈ ಘೋಷಣೆ ಹೀಗಿದೆ. 1948 ಡಿಸೆಂಬರ್ 10 ರಂದು ವಿಶ್ವಸಂಸ್ಥೆಯು ಸಾಮಾನ್ಯ ಸಭೆಯ ನಿರ್ಣಯ 217ಎ(111) ರ ಮೂಲಕ ಮಾನವ ಹಕ್ಕುಗಳನ್ನು ದೃಢೀಕರಿಸಿತು. ವಿಶ್ವಸಂಸ್ಥೆಯು ಮಾನವ ಹಕ್ಕುಗಳ ಘೋಷಣೆಯು ಒಟ್ಟು 30 ಪರಿಚ್ಛೇದಗಳನ್ನು ಹೊಂದಿದೆ. 1995 ರಿಂದ 2004 ರ ಅವಧಿಯನ್ನು "ಮಾನವ ಹಕ್ಕುಗಳ ದಶಕ" ಎಂದು ವಿಶ್ವಸಂಸ್ಥೆ ಘೋಷಿಸಿತು.
- ರೂಸ್ ವೆಲ್ಟ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮಾನವ ಹಕ್ಕುಗಳ ಜಾಗತಿಕ ಘೋಷಣೆಯನ್ನು ಕರಡನ್ನು ಸಿದ್ಧಪಡಿಸುವ ಹೊಣೆಯನ್ನು ಇಕೋಸೋಕ್ ಸಮಿತಿಗೆ ಒಪ್ಪಿಸಿತು. ಈ ಸಮಿತಿ ಸಿದ್ಧಪಡಿಸಿದ ಘೋಷಣೆಯನ್ನು ಸನ್ 1948 ಡಿಸೆಂಬರ್ 10 ರಂದು ವಿಶ್ವಸಂಸ್ಥೆಯ ಸಾಮಾನ್ಯ ಅಧಿವೇಶನದಲ್ಲಿ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

## UNIVERSAL DICLARATION OF HR

**The Universal Declaration of Human Rights (UDHR) is a milestone document in the history of human rights. Drafted by representatives with different legal and cultural backgrounds from all regions of the world, the Declaration was proclaimed by the United Nations General Assembly in Paris on 10 December 1948 General Assembly resolution 217(III) A as a common standard of achievements for all peoples and all nations. It sets out, for the first time, fundamental human rights to be universally protected.**
**1995 – 2004 Decade of Human Rights.**

### ಮಾನವ ಹಕ್ಕುಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು.

### ಮಾನವ ಹಕ್ಕುಗಳು

| | |
|---|---|
| 01 | ಆತ್ಮ ಗೌರವದ ಸ್ವಾತಂತ್ರ್ಯ ಮತ್ತು ಸಮಾನತೆ ಹಕ್ಕು.<br>All human beings are born free and equal in dignity and rights. |
| 02 | ಯಾವುದೇ ರೀತಿಯ ತಾರತಮ್ಯ ಇಲ್ಲದೆ ಸ್ವತಂತ್ರ್ಯವಾಗಿ ಸ್ವಾತಂತ್ರ್ಯ ಅನುಭವಿಸುವ ಹಕ್ಕು.<br>Everyone is entitled to all the rights and freedoms set forth in this Declaration, without distinction of any kind, such as race, colour, sex, language, religion, political or other opinion, national or social origin, property, birth or other status. |
| | ಅ) ನಾಗರೀಕ ಮತ್ತು ರಾಜಕೀಯ ಹಕ್ಕುಗಳು (ಪರಿಚ್ಛೇದ 3–21) |
| 03 | ಪ್ರತಿಯೊಬ್ಬರಿಗೂ ಜೀವಿಸುವ, ಭದ್ರತೆಯ ಹಾಗೂ ವ್ಯಕ್ತಿ ಸ್ವಾತಂತ್ರ್ಯವಿದೆ.<br>Everyone has the right to life, liberty and security of person. |
| 04 | ಯಾವ ವ್ಯಕ್ತಿಯನ್ನೂ ಗುಲಾಮಗಿರಿಗೆ ಹಾಗೂ ದಾಸ್ಯಕ್ಕೊಳಪಡಿಸುವುದನ್ನು ನಿಷೇಧಿಸಲಾಗಿದೆ.<br>No one shall be held in slavery or servitude; slavery and the slave trade shall be prohibited in all their forms. |

| | |
|---|---|
| 05 | ಯಾರನ್ನೂ ಕೀಳಾಗಿ,ಕ್ರೂರವಾಗಿ, ಅಮಾನವೀಯವಾಗಿ ಚಿತ್ರಹಿಂಸೆಗೆ ಹಾಗೂ ಶಿಕ್ಷೆಗೆ ಗುರಿಪಡಿಸುವಂತಿಲ್ಲ.<br>No one shall be subjected to torture or to cruel, inhuman or degrading treatment or punishment. |
| 06 | ಕಾನೂನಿನ ಮುಂದೆ ಒಬ್ಬ ವ್ಯಕ್ತಿಯಾಗಿ ಗುರುತಿಸಿಕೊಳ್ಳುವ ಹಕ್ಕು.<br>Everyone has the right to recognition everywhere as a person before the law. |
| 07 | ಕಾನೂನಿನ ಮುಂದೆ ಎಲ್ಲರೂ ಸಮಾನರು. ಯಾವುದೇ ತಾರತಮ್ಯ ಇಲ್ಲದೆ ಸಮಾನ ರಕ್ಷಣೆ ಪಡೆಯುವ ಹಕ್ಕು.<br>All are equal before the law and are entitled without any discrimination to equal protection of the law. |
| 08 | ಸಮರ್ಥ ನ್ಯಾಯಮಂಡಳಿಯ ಮೂಲಕ ಪರಿಹಾರ ಪಡೆಯುವ ಹಕ್ಕು.<br>Everyone has the right to an effective remedy by the competent national tribunals for acts violating the fundamental rights granted him by the constitution or by law. |
| 09 | ಯಾರನ್ನೂ ಸ್ವೇಚ್ಛಾನುಸಾರವಾಗಿ ದಸ್ತಗಿರಿ ಮಾಡುವಂತಿಲ್ಲ ಹಾಗೂ ಗಡೀಪಾರು ಮಾಡುವಂತಿಲ್ಲ.<br>No one shall be subjected to arbitrary arrest, detention or exile. |
| 10 | ವ್ಯಕ್ತಿ ಕ್ರಿಮಿನಲ್ ಮೊಕದ್ದಮೆಗಳಿಗೆ ಗುರಿಯಾಗಿದ್ದರೆ ನ್ಯಾಯ ಮಂಡಳಿಯ ಮೂಲಕ ನ್ಯಾಯಯುತವಾಗಿ ವಿಚಾರಣೆಗೆ ಒತ್ತಾಯಿಸುವ ಹಕ್ಕು.<br>Everyone is entitled in full equality to a fair and public hearing by an independent and impartial tribunal, in the determination of his rights and obligations and of any criminal charge against him. |

| | |
|---|---|
| 11 | ಅಪರಾಧಿ ಎಂದು ಸಾಬೀತಾಗುವವರೆಗೂ ನಿರಪರಾಧಿ ಎಂದು ಭಾವಿಸುವ ಹಕ್ಕು.<br>Everyone charged with a penal offence has the right to be presumed innocent until proved guilty according to law in a public trial at which he has had all the guarantees necessary for his defence. |
| 12 | ಬೇರೊಬ್ಬರ ವೈಯುಕ್ತಿಕ ಬದುಕಿನಲ್ಲಿ, ಕುಟುಂಬ, ಮನೆ, ಪತ್ರ ವ್ಯವಹಾರದಲ್ಲಿ ಬೇರೆಯವರು ಹಸ್ತಕ್ಷೇಪ ಮಾಡುವಂತಿಲ್ಲ.<br>No one shall be subjected to arbitrary interference with his privacy, family, home or correspondence, nor to attacks upon his honour and reputation. |
| 13 | ವ್ಯಕ್ತಿ ವಿಶ್ವದ ಯಾವುದೇ ದೇಶದಲ್ಲಿ ಸಂಚರಿಸುವ, ವಾಸಿಸುವ ಇಲ್ಲದೇ ಸ್ವದೇಶಕ್ಕೆ ವಾಪಾಸಾಗುವ ಹಕ್ಕು.<br>Everyone has the right to freedom of movement and residence within the borders of each State. Everyone has the right to leave any country, including his own, and to return to his country. |
| 14 | ವ್ಯಕ್ತಿ ತಾನು ರಾಜಕೀಯವಾಗಿ ಅನುಭವಿಸುತ್ತಿರುವ ಕಿರುಕುಳದಿಂದ ತಪ್ಪಿಸಿಕೊಳ್ಳಲು ಬೇರೊಂದು ರಾಷ್ಟ್ರದ ಆಶ್ರಯ ಪಡೆಯುವ ಹಕ್ಕು.<br>Everyone has the right to seek and to enjoy in other countries asylum from persecution. |
| 15 | ಎಲ್ಲರಿಗೂ ರಾಷ್ಟ್ರೀಯತೆಯ ಹಕ್ಕಿದೆ. ಈ ರಾಷ್ಟ್ರೀಯತೆಯನ್ನು ಬದಲಾಯಿಸಿಕೊಳ್ಳುವ ಆತನ ಹಕ್ಕನ್ನು ನಿರಾಕರಿಸುವಂತಿಲ್ಲ.1. Everyone has the right to a nationality.<br>2. No one shall be arbitrarily deprived of his nationality nor denied the right to change his nationality. |

| | |
|---|---|
| 16 | ಪ್ರಾಪ್ತ ವಯಸ್ಸಿನ ಸ್ತ್ರೀ ಪುರುಷರು ರಾಷ್ಟ್ರೀಯತೆಯ ಭೇದ ಇಲ್ಲದೆ ವಿವಾಹ ಆಗಬಹುದು ಹಾಗೂ ಆ ಕುಟುಂಬಕ್ಕೆ ಸಮಾಜ, ರಾಜ್ಯದಿಂದ ರಕ್ಷಣೆ ಪಡೆಯುವ ಹಕ್ಕು ಇದೆ.<br>Men and women of full age, without any limitation due to race, nationality or religion, have the right to marry and to found a family. They are entitled to equal rights as to marriage, during marriage and at its dissolution. |
| 17 | ಪ್ರತಿಯೊಬ್ಬರಿಗೂ ಸ್ವಂತ ಆಸ್ತಿ ಪಡೆಯುವ ಹಕ್ಕಿದೆ. ಇದಕ್ಕೆ ಯಾರೂ ಅಡ್ಡಿ ಬರುವಂತಿಲ್ಲ.<br>Everyone has the right to own property alone as well as in association with others. |
| 18 | ಎಲ್ಲರಿಗೂ ತಮ್ಮ ಆತ್ಮ ಸಾಕ್ಷಿಗನುಸಾರವಾಗಿ ಧರ್ಮವನ್ನು ಪಾಲಿಸುವ ಅಥವಾ ಧರ್ಮ ನಂಬಿಕೆಯನ್ನು ಬದಲಿಸುವ ಸ್ವಾತಂತ್ರ್ಯದ ಹಕ್ಕು ಇದೆ. Everyone has the right to freedom of thought, conscience and religion; this right includes freedom to change his religion or belief, and freedom, either alone or in community with others and in public or private, to manifest his religion or belief in teaching, practice, worship and observance. |
| 19 | ಎಲ್ಲರಿಗೂ ವಾಕ್ ಮತ್ತು ವ್ಯಕ್ತಿ ಸ್ವಾತಂತ್ರ್ಯ ಹಾಗೂ ಮಾಹಿತಿ ಸ್ವಾತಂತ್ರ್ಯದ ಹಕ್ಕು ಇದೆ.<br>Everyone has the right to freedom of opinion and expression; this right includes freedom to hold opinions without interference and to seek, receive and impart information and ideas through any media and regardless of frontiers. |
| 20 | ಎಲ್ಲರಿಗೂ ಶಾಂತಿಯುತವಾಗಿ ಸಭೆ ಸೇರುವ ಮತ್ತು ಸಂಘ ಸಂಸ್ಥೆಗಳನ್ನು ಕಟ್ಟುವ ಸ್ವಾತಂತ್ರ್ಯ ಇದೆ.<br>Everyone has the right to freedom of peaceful assembly and association. |

| | |
|---|---|
| 21 | ಎಲ್ಲರಿಗೂ ಅವರ ದೇಶದ ಸರ್ಕಾರದಲ್ಲಿ, ಚುನಾವಣೆಗಳಲ್ಲಿ ಮತ್ತು ಸಾರ್ವಜನಿಕ ಸೇವೆಗಳಲ್ಲಿ ಭಾಗವಹಿಸುವ ಸ್ವಾತಂತ್ರ್ಯದ ಹಕ್ಕು ಇದೆ.<br>Everyone has the right to take part in the government of his country, directly or through freely chosen representatives The will of the people shall be the basis of the authority of government; this will shall be expressed in periodic and genuine elections which shall be by universal and equal suffrage and shall be held by secret vote or by equivalent free voting procedures. |
| | **ಬ) ಆರ್ಥಿಕ ಮತ್ತು ಸಾಮಾಜಿಕ ಹಕ್ಕುಗಳು (ಪರಿಚ್ಛೇದ 22–30)** |
| 22 | ಸಮಾಜದ ಒಬ್ಬ ಸದಸ್ಯನಾಗಿ ಪ್ರತಿಯೊಬ್ಬ ವ್ಯಕ್ತಿಯೂ ಸಾಮಾಜಿಕ ಭದ್ರತೆಯನ್ನು ಪಡೆಯುವ ಹಕ್ಕು ಇದೆ.<br>Everyone, as a member of society, has the right to social security and is entitled to realization, through national effort and international co-operation and in accordance with the organization and resources of each State, of the economic, social and cultural rights indispensable for his dignity and the free development of his personality. |
| 23 | ಎಲ್ಲರೂ ತಮ್ಮ ಸಾಮರ್ಥ್ಯಕ್ಕನುಸಾರವಾಗಿ ಉದ್ಯೋಗಗಳನ್ನು ಮಾಡುವ ಮತ್ತು ಆಯಾ ಉದ್ಯೋಗಕ್ಕೆ ತಕ್ಕಂತೆ ವೇತನ ಪಡೆಯುವ ಸ್ವಾತಂತ್ರ್ಯ.<br>Everyone has the right to work, to free choice of employment, to just and favourable conditions of work and to protection against unemployment.<br>Everyone, without any discrimination, has the right to equal pay for equal work |
| 24 | ಪ್ರತಿಯೊಬ್ಬರಿಗೂ ಶಿಕ್ಷಣ ಪಡೆಯುವ ಸ್ವಾತಂತ್ರ್ಯದ ಹಕ್ಕು ಇದೆ.<br>Everyone has the right to education. Education shall be free, at least in the elementary and fundamental stages. Elementary education shall be compulsory. Technical and professional education shall be made generally available and higher education shall be equally accessible to all, on the basis of merit. |

| | |
|---|---|
| 25 | ಪ್ರತಿಯೊಬ್ಬ ವ್ಯಕ್ತಿಗೂ ಕೆಲಸದ ದಿನದ ಮಧ್ಯೆ ಹಾಗೂ ಸಂಬಳ ಸಹಿತ ರಜಾ ದಿನಗಳೂ ಸೇರಿದಂತೆ ವಿಶ್ರಾಂತಿ ಮತ್ತು ವಿರಾಮ ಪಡೆಯುವ ಹಕ್ಕು ಇದೆ.<br>Everyone has the right to rest and leisure, including reasonable limitation of working hours and periodic holidays with pay. |
| 26 | ಎಲ್ಲಾ ವ್ಯಕ್ತಿಗಳ ಕುಟುಂಬ ವರ್ಗದವರು ಆರೋಗ್ಯ ಮತ್ತು ನೆಮ್ಮದಿಯಿಂದ ಜೀವಿಸುವ ಹಕ್ಕು ಇದೆ.<br>Everyone has the right to a standard of living adequate for the health and well-being of himself and of his family, including food, clothing, housing and medical care and necessary social services, and the right to security in the event of unemployment, sickness, disability, widowhood, old age or other lack of livelihood in circumstances beyond his control. |
| 27 | ಪ್ರತಿಯೊಬ್ಬ ವ್ಯಕ್ತಿಗೂ ಸಮುದಾಯದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವ ಹಕ್ಕು ಇದೆ.<br>Everyone has the right freely to participate in the cultural life of the community, to enjoy the arts and to share in scientific advancement and its benefits. |
| 28 | ಪ್ರತಿಯೊಬ್ಬರೂ ಸಾಮಾಜಿಕ ಮತ್ತು ಅಂತರಾಷ್ಟ್ರೀಯ ನೀತಿಗೆ ಹಕ್ಕುದಾರರಾಗಿರುತ್ತಾರೆ.<br>Everyone is entitled to a social and international order in which the rights and freedoms set forth in this Declaration can be fully realized. |

| | |
|---|---|
| 25 | ಪ್ರತಿಯೊಬ್ಬ ವ್ಯಕ್ತಿಗೂ ಕೆಲಸದ ದಿನದ ಮಧ್ಯೆ ಹಾಗೂ ಸಂಬಳ ಸಹಿತ ರಜಾ ದಿನಗಳೂ ಸೇರಿದಂತೆ ವಿಶ್ರಾಂತಿ ಮತ್ತು ವಿರಾಮ ಪಡೆಯುವ ಹಕ್ಕು ಇದೆ. |
| 26 | ಎಲ್ಲಾ ವ್ಯಕ್ತಿಗಳ ಕುಟುಂಬ ವರ್ಗದವರು ಆರೋಗ್ಯ ಮತ್ತು ನೆಮ್ಮದಿಯಿಂದ ಜೀವಿಸುವ ಹಕ್ಕು ಇದೆ. |
| 27 | ಪ್ರತಿಯೊಬ್ಬ ವ್ಯಕ್ತಿಗೂ ಸಮುದಾಯದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವ ಹಕ್ಕು ಇದೆ. |
| 28 | ಪ್ರತಿಯೊಬ್ಬರೂ ಸಾಮಾಜಿಕ ಮತ್ತು ಅಂತರಾಷ್ಟ್ರೀಯ ನೀತಿಗೆ ಹಕ್ಕುದಾರರಾಗಿರುತ್ತಾರೆ. |
| 29 | ಎ. ಪ್ರತಿಯೊಬ್ಬರಿಗೂ ಅವರವರ ಸಮುದಾಯಕ್ಕೆ ಸಂಬಂಧಿಸಿದ ಕರ್ತವ್ಯಗಳಿರುತ್ತವೆ. ಇವುಗಳನ್ನು ಮಾಡುವುದರಿಂದ ಮಾತ್ರ ವ್ಯಕ್ತಿತ್ವದ ಸಂಪೂರ್ಣ ಮತ್ತು ಸ್ವತಂತ್ರ ಬೆಳವಣಿಗೆ ಸಾಧ್ಯ. |
| | ಬಿ. ಹಕ್ಕು ಮತ್ತು ಸ್ವಾತಂತ್ರ್ಯವನ್ನು ಅನುಭವಿಸುವ ಎಲ್ಲರೂ ಕಾನೂನಿನ ಮಿತಿಯೊಳಗೆ ನಡೆಯುವುದರಿಂದ ಸಾಮಾಜಿಕ ನೀತಿ ಮತ್ತು ಸಾರ್ವಜನಿಕ ಶಿಸ್ತನ್ನು ಕಾಪಾಡಿದಂತಾಗುತ್ತದೆ. |
| | ಸಿ. ವಿಶ್ವಸಂಸ್ಥೆಗೆ ವಿರುದ್ಧವಾಗಿ ಹಕ್ಕು ಮತ್ತು ಸ್ವಾತಂತ್ರ್ಯವನ್ನು ಚಲಾಯಿಸುವಂತಿಲ್ಲ. |
| 30 | ಈ ಮೇಲಿನ ಯಾವುದೇ ಹಕ್ಕು ಹಾಗೂ ಸ್ವಾತಂತ್ರ್ಯವನ್ನು ಯಾವುದೇ ರಾಜ್ಯ, ಗುಂಪು ಅಥವಾ ವ್ಯಕ್ತಿ ತನಗೆ ಬೇಕಾದ ರೀತಿಯಲ್ಲಿ ವ್ಯಾಖ್ಯಾನಿಸಿಕೊಂಡು ಅದನ್ನು ನಾಶಗೊಳಿಸುವ ಯಾವುದೇ ಚಟುವಟಿಕೆಯಲ್ಲಿ ತೊಡಗುವಂತಿಲ್ಲ. |

## ಮಾನವ ಹಕ್ಕುಗಳ ಲಕ್ಷಣಗಳು

- ಮಾನವ ಹಕ್ಕುಗಳ ಘೋಷಣೆಯಂತೆ ಎಲ್ಲ ಮಾನವರೂ ಹುಟ್ಟಿನಿಂದ ಸಮಾನರು.
- ಜಾತಿ, ವರ್ಣ, ಲಿಂಗ, ಭಾಷೆ, ಧರ್ಮ,ಆಸ್ತಿ, ಹುಟ್ಟು ಇತರ ಯಾವುದೇ ಪರಿಗಣನೆಗೆ ಒಳಗಾಗದೇ ಸಮಾನ ಹಕ್ಕು ಗೌರವಗಳಿಗೆ ಎಲ್ಲರೂ ಪಾತ್ರರು.
- ಮಾನವ ಹಕ್ಕುಗಳು ಪ್ರತಿ ಸಮಾಜ ಸಂರಚನೆಯ ಆಧಾರ ಸ್ಥಂಭಗಳಾಗಿವೆ.
- ಮಾನವ ಹಕ್ಕುಗಳು ಜಗತ್ತಿನ ಮಾನವ ಕುಲದ ಘನತೆಯನ್ನು ಮಾನ್ಯ ಮಾಡುತ್ತವೆ.

---

- ಜನಸಾಮಾನ್ಯರ ಅತ್ಯುನ್ನತ ಆಶೋತ್ತರಗಳನ್ನು ಈಡೇರಿಸುತ್ತವೆ.
- ಮಾನವನನ್ನು ನಿರಂಕುಶ ಪ್ರಭುತ್ವ ಮತ್ತು ದಬ್ಬಾಳಿಕೆಯಿಂದ ಮುಕ್ತಗೊಳಿಸಲಾಗಿದೆ.
- ಮಾನವ ಹಕ್ಕುಗಳು ವಿಶ್ವಮಾನ್ಯವಾದವುಗಳಾಗಿದ್ದು ವಿಶ್ವ ಸಂಸ್ಥೆಯಿಂದ ಅಂಗೀಕರಿಸಲ್ಪಟ್ಟಿವೆ.
- ಮಾನವ ಹಕ್ಕುಗಳನ್ನು ಅನುಭವಿಸಲು ಮತ್ತು ರಕ್ಷಿಸಲು ಪ್ರೇರಣೆ ಪಡೆಯಬೇಕೆನ್ನುವದು ವಿಶ್ವ ಸಂಸ್ಥೆಯ ಉದಾತ್ತ ಆಶಯವಾಗಿದೆ.

## ಮಾನವ ಹಕ್ಕುಗಳನ್ನು ಉತ್ತೇಜನಗೊಳಿಸುವ ಕಾರ್ಯತಂತ್ರಗಳು.

- 1 <u>ಪ್ರತ್ಯಕ್ಷ ಬೋಧನಾ ಪದ್ಧತಿಗಳು</u>:– ಈ ಪದ್ಧತಿಯಲ್ಲಿ ಮಾನವ ಹಕ್ಕುಗಳನ್ನು ಕುರಿತಾದ ನೇರಪಾಠಗಳು, ಪ್ರಾಜೆಕ್ಟಗಳು,ಪ್ರಬಂಧ, ಲೇಖನ, ಚಿತ್ರ ಸಂಗ್ರಹ, ಇತ್ಯಾದಿ ಮನೆಕೆಲಸಗಳು, ಕ್ವಿಜ್ ಸ್ಪರ್ಧೆಗಳು, ಚರ್ಚಾಸ್ಪರ್ಧೆ, ಭಾಷಣ ಸ್ಪರ್ಧೆ, ವಿಚಾರಸಂಕಿರಣ ಇವೇ ಮೊದಲಾದವುಗಳ ಮೂಲಕ ವಿದ್ಯಾರ್ಥಿಗಳಲ್ಲಿ ಅರಿವನ್ನು ಮೂಡಿಸಿ ಜಾಗೃತಿ ಮೂಡಿಸಬಹುದು.
- 2 <u>ಸಾಂದರ್ಭಿಕ ಬೋಧನಾ ಪದ್ಧತಿಗಳು</u>:–ಬೇರೆ ಬೇರೆ ರೀತಿಯ ರಾಷ್ಟೀಯ ಹಾಗೂ ಅಂತರರಾಷ್ಟ್ರೀಯ ದಿನಾಚರಣೆಗಳು, ಪ್ರಸಿದ್ಧ ಹೆಸರಾಂತ ವ್ಯಕ್ತಿಗಳ ದಿನಾಚರಣೆಗಳು, ಮಾನವ ಹಕ್ಕುಗಳಿಗಾಗಿ ಹೋರಾಡಿದ ಅಬ್ರಾಹಂ ಲಿಂಕನ್, ಗಾಂಧೀಜಿ, ಮಾರ್ಟಿನ್, ಲೂಥರ್ ಕಿಂಗ್ ಮುಂತಾದವರ ಜನ್ಮದಿನದಂದು ಕಾರ್ಯಕ್ರಮಗಳನ್ನು ಯೋಜಿಸಿಕೊಂಡು ಮಾನವ ಹಕ್ಕುಗಳ ಬಗ್ಗೆ ವಿದ್ಯಾರ್ಥಿಗಳಿಗೆ ಪರಿಚಯಿಸಿಕೊಡುವುದು.
- 3 <u>ಪರೋಕ್ಷ ಬೋಧನಾ ಪದ್ಧತಿಗಳು</u>:– **ಇದರಲ್ಲಿ 2 ಪ್ರಕಾರಗಳಿವೆ.** 1.)ಇತರ ಪಠ್ಯ ವಿಷಯಗಳ ಮೂಲಕ: ಭಾಷಾ ವಿಷಯಗಳು, ಇತಿಹಾಸ, ಪೌರನೀತಿ, ಅರ್ಥಶಾಸ್ತ್ರ, ಮುಂತಾದ ವಿಷಯಗಳನ್ನು ಬೋಧಿಸುವಾಗ ಮಾನವ ಹಕ್ಕುಗಳಿಗೆ ಸಂಬಂಧಿಸಿದ ವಿಷಯಗಳನ್ನು ಹೇಳುವುದು. 2) ಸಹಪಠ್ಯ ಚಟುವಟಿಕೆ ಮೂಲಕ: ಆಟಗಳು, ಕ್ರೀಡೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ಛಾಯಚಿತ್ರ ಪ್ರದರ್ಶನಗಳ ಮೂಲಕ ಮಾನವ ಹಕ್ಕುಗಳನ್ನು ಪರಿಚಯಿಸಿಕೊಡುವುದು.

## ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ (NHRC)
## (The National Human Rights commission)

- ಭಾರತದಲ್ಲಿ ಮಾನವ ಹಕ್ಕುಗಳ ಸಂರಕ್ಷಣೆಯ ಉದ್ದೇಶದಿಂದ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವನ್ನು 1993 ಅಕ್ಟೋಬರ್ 12 ರಂದು ಸ್ಥಾಪಿಸಲಾಯಿತು. ಮಾನವ ಹಕ್ಕುಗಳ ಕಾಯ್ದೆಯನ್ನು ಜಾರಿಗೆ ತಂದ ಮೇರೆಗೆ ಈ ಆಯೋಗವು ಅಸ್ತಿತ್ವಕ್ಕೆ ಬಂದಿತು. ಭಾರತ ಸಂವಿಧಾನದಲ್ಲಿ ನಿರೂಪಿತವಾಗಿರುವ ವ್ಯಕ್ತಿಯ ಹಕ್ಕುಬಾಧ್ಯತೆಗಳು ಹಾಗೂ ಮಾನವ ಹಕ್ಕುಗಳಿಗೆ ಸಂಬಂಧಿಸಿದಂತೆ ಎರಡು ಒಡಂಬಡಿಕೆಗಳಲ್ಲಿ ಉಲ್ಲೇಖಿತ ಹಕ್ಕುಗಳು ಸೇರಿ ಮಾನವ ಹಕ್ಕುಗಳು ಎಂದು ಗುರುತಿಸಲಾಗಿದೆ.

ಮಾನವ ಹಕ್ಕುಗಳ ಆಯೋಗದ ರಚನೆ:–

(Human Rights commission)

ರಾಷ್ಟ್ರೀಯ ಮಾನವ ಹಕ್ಕಿನ ಆಯೋಗದ ಅಧ್ಯಕ್ಷರನ್ನು ಮತ್ತು ಸದಸ್ಯರನ್ನು ನೇಮಕ ಮಾಡುವಂತೆ ರಾಷ್ಟ್ರಪತಿಯವರಿಗೆ ಈ ಕೆಳಕಂಡ ರಚನಾ ಸಮಿತಿಯು ರಾಷ್ಟ್ರಪತಿಗಳಿಗೆ ಶಿಫಾರಸ್ಸು ಮಾಡುತ್ತದೆ. ಈ ರಚನಾ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರೆಂದರೆ,

ಅಧ್ಯಕ್ಷರು : ಪ್ರಧಾನಮಂತ್ರಿ

ಸದಸ್ಯರು :–ಲೋಕಸಭಾ ಅಧ್ಯಕ್ಷರು ಲೋಕಸಭೆಯ ವಿರೋಧ ಪಕ್ಷದ ನಾಯಕರು ರಾಜ್ಯ ಸಭೆಯ ಉಪಾಧ್ಯಕ್ಷರು, ರಾಜ್ಯ ಸಭೆಯ ವಿರೋಧ ಪಕ್ಷದ ನಾಯಕರು, ಭಾರತ ಸರ್ಕಾರದ ಗೃಹ ವ್ಯವಹಾರಗಳ ಮಂತ್ರಾಲಯದ ಪ್ರಭಾರ ಹೊಂದಿರುವ ಮಂತ್ರಿ.

**ಆಯೋಗದ ರಚನೆ :–**

**ಅಧ್ಯಕ್ಷರು :– ಸರ್ವೋಚ್ಛ ನ್ಯಾಯಾಲಯದ ನಿವೃತ್ತ ಒಬ್ಬ ಶ್ರೇಷ್ಠ ನ್ಯಾಯಾಧೀಶರು.**

**ಸದಸ್ಯರು :– ಸರ್ವೋಚ್ಛ ನ್ಯಾಯಾಲಯದ ನಿವೃತ್ತ ಅಥವಾ ಪ್ರಸ್ತುತ ಒಬ್ಬ ನ್ಯಾಯಾಧೀಶರು.**

**– ಯಾವುದೇ ರಾಜ್ಯದ ಉಚ್ಛ ನ್ಯಾಯಾಲಯದ ಒಬ್ಬ ನ್ಯಾಯಾಧೀಶರು.**

**– ಮಾನವ ಹಕ್ಕುಗಳಿಗೆ ಸಂಬಂಧಿಸಿರುವ ವಿಷಯಗಳಲ್ಲಿ ತಿಳುವಳಿಕೆ ಅಥವಾ ವ್ಯವಹಾರಿಕ ಅನುಭವವುಳ್ಳ ಇಬ್ಬರು ಸದಸ್ಯರು.**

**– ಅಲ್ಪಸಂಖ್ಯಾತರ ರಾಷ್ಟ್ರೀಯ ಆಯೋಗದ ಅಧ್ಯಕ್ಷರು.**

**– ಅನುಸೂಚಿತ ಜಾತಿ ಮತ್ತು ಪಂಗಡಗಳ ರಾಷ್ಟ್ರೀಯ ಅಧ್ಯಕ್ಷರು.**

**– ಮಹಿಳಾ ರಾಷ್ಟ್ರೀಯ ಆಯೋಗದ ಅಧ್ಯಕ್ಷರು.**

**ಕಾರ್ಯದರ್ಶಿ :– ಭಾರತದ ಸರ್ಕಾರದ ಕಾರ್ಯದರ್ಶಿಯ ಪದ ಶ್ರೇಣಿಯ ಒಬ್ಬ ಅಧಿಕಾರಿ.**

- ಹೀಗೆ 9 ಜನರನ್ನೊಳಗೊಂಡ ರಾಷ್ಟ್ರೀಯ ಮಾನವ ಹಕ್ಕು ಆಯೋಗವು ಪೂರ್ಣ ಸ್ವಾಯತ್ತ ಸಂಸ್ಥೆ ಆಗಿದೆ. ಈ ಆಯೋಗದ ಮುಖ್ಯ ಕಛೇರಿಯು ದೆಹಲಿಯಲ್ಲಿದೆ. ಮಾನವ ಹಕ್ಕುಗಳ ಉಲ್ಲಂಘನೆಯ ಪ್ರಕರಣಗಳನ್ನು ತನಿಖೆ ಮಾಡಲು ಪೋಲಿಸ್ ಮಹಾನಿರ್ದೇಶಕರ ಒಂದು ತಂಡವನ್ನು ಸಹ ಹೊಂದಿದೆ. ಕೇಂದ್ರ ಸರ್ಕಾರದ ಪೂರ್ವಾನುಮತಿಯೊಂದಿಗೆ ಭಾರತದ ಇತರ ಸ್ಥಳಗಳಲ್ಲಿ ಕಛೇರಿಗಳನ್ನು ತೆರೆಯಬಹುದು.
- ಈ ಆಯೋಗದ ಅಧ್ಯಕ್ಷರ ಮತ್ತು ಸದಸ್ಯರ ಅವಧಿ ಅಧಿಕಾರ ಸ್ವೀಕರಿಸಿದಂದಿನಿಂದ ಐದು(5) ವರ್ಷಗಳಾಗಿರುತ್ತದೆ. ಅಧ್ಯಕ್ಷರು ಅಥವಾ ಸದಸ್ಯರು ತಮ್ಮ ಅವಧಿಯನ್ನು ಪೂರ್ಣಗೊಳಿಸಿದ ನಂತರ, ಕೇಂದ್ರ ಅಥವಾ ರಾಜ್ಯ ಸರ್ಕಾರದ ಲಾಭ ಬರುವಂತಹ ಯಾವುದೇ ಹುದ್ದೆಗಳಲ್ಲಿ ಮುಂದುವರೆಯಲು ಅವಕಾಶ ಇಲ್ಲ.

ಆಯೋಗದ ಪ್ರಕ್ರಿಯೆಗಳು :–

1)ಅಧ್ಯಕ್ಷರು ತಮಗೆ ಯೋಗ್ಯ ಕಂಡ ಸ್ಥಳ ಮತ್ತು ವೇಳೆಯಲ್ಲಿ ಆಯೋಗದ ಸಭೆ ಕರೆಯತಕ್ಕದ್ದು.

ಅ) ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿರುವ ಅಧ್ಯಕ್ಷರಿರತಕ್ಕದ್ದು.

ಬ) ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿದ್ದವರು ಒಬ್ಬರು ಸದಸ್ಯರಾಗಿರತಕ್ಕದ್ದು.

- ಕ) ಮಾನವ ಹಕ್ಕುಗಳಿಗೆ ಸಂಬಂಧಿಸಿದಂತೆ ಜ್ಞಾನ ಇಲ್ಲವೇ ಮಾನವ ಹಕ್ಕುಗಳಿಗೆ ಸಂಬಂಧಿಸಿದಂತೆ ವ್ಯವಹಾರಿಕ ಅನುಭವ ಇದ್ದವರ ವ್ಯಕ್ತಿಗಳಿಂದ ನೇಮಿಸಲ್ಪಡಬೇಕಾಗಿರುವ ಇಬ್ಬರು ಸದಸ್ಯರು.

2) ಆಯೋಗವು ತನ್ನದೇಯಾದ ಪ್ರಕ್ರಿಯೆಯನ್ನು ವಿನಿಯೋಗಿಸಬಹುದು.

3) ಆಯೋಗದಿಂದ ಎಲ್ಲ ಆದೇಶ ಮತ್ತು ತೀರ್ಮಾನಗಳನ್ನು ಮಹಾಕಾರ್ಯದರ್ಶಿ ಅಥವಾ ಅಧ್ಯಕ್ಷರಿಂದ ಈ ಬಗ್ಗೆ ಅಧಿಕಾರ ಪಡೆದು ಯಾವುದೇ ಅಧಿಕಾರಿ ಪ್ರಮಾಣೀಕರಿಸಬೇಕು.

ಮಾನವ ಹಕ್ಕುಗಳ ಆಯೋಗದ ಉದ್ದೇಶಗಳು ಹಾಗೂ ಕಾರ್ಯಗಳು (Objectives and Functions of NHRC)

ಮಾನವ ಹಕ್ಕುಗಳ ಆಯೋಗ ಹಲವಾರು ಉದ್ದೇಶ ಹಾಗೂ ಕಾರ್ಯಗಳನ್ನು ಹೊಂದಿದ್ದು ಅವು ಈ ಕೆಳಗಿನಂತಿವೆ.

1) ಮಾನವ ಹಕ್ಕುಗಳ ಉಲ್ಲಂಘನೆಯನ್ನು ತಡೆಗಟ್ಟುವದು. ಅನ್ಯಾಯಕ್ಕೆ ಒಳಗಾದ ವ್ಯಕ್ತಿಗಳ ಹಕ್ಕುಗಳ ಕುರಿತು ಪರಿಶೀಲಿಸುವುದು.
2) ಮಾನವ ಹಕ್ಕುಗಳ ಸಂಬಂಧದಲ್ಲಿ ಸಂಶೋಧನೆ ಕೈಗೊಳ್ಳುವುದು ಮತ್ತು ಪ್ರೋತ್ಸಾಹ ನೀಡುವುದು.
3) ಸ್ವಯಂ ಸ್ಫೂರ್ತಿಯಿಂದ ಅಥವಾ ಸಂತ್ರಸ್ತ ವ್ಯಕ್ತಿ ಅಥವಾ ಆತನ ಪರವಾಗಿ ಯಾರಾದರೂ ಸಲ್ಲಿಸಿದ ದೂರಿನನ್ವಯ ತನಿಖೆ ಮಾಡುವುದು.

4) ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿರುವಾಗ ಅಂಥ ನ್ಯಾಯಾಲಯದ ಅನುಮೋದನೆ ಪಡೆದು ಮಧ್ಯ ಪ್ರವೇಶಿಸಬಹುದು.

5) ಬೇರೆ ಬೇರೆ ಸಂಸ್ಥೆಗಳಲ್ಲಿ ವ್ಯಕ್ತಿಗಳನ್ನು ಸುಧಾರಣೆ ಅಥವಾ ಸಂರಕ್ಷಣೆಯ ಉದ್ದೇಶದಿಂದ ಜೈಲಿನಲ್ಲಿ ಹಿಡಿದಿಟ್ಟಿದ್ದರೆ ಅವರನ್ನು ಸಂದರ್ಶಿಸಿ ಒಳಗಿರುವ ವ್ಯಕ್ತಿಗಳ ಜೀವನ ಸ್ಥಿತಿಯನ್ನು ಅಭ್ಯಸಿಸಿ ಶಿಫಾರಸ್ಸು ಮಾಡುವುದು.

6) ಸಂವಿಧಾನದಲ್ಲಿ ಹಾಗೂ ಜಾರಿಯಲ್ಲಿದ್ದ ಮಾನವ ಹಕ್ಕುಗಳ ಸಂರಕ್ಷಣೆ ಬಗ್ಗೆ ಪುನರುಜ್ಜೀವನಗೊಳಿಸುವುದು.

7) ಮಾನವ ಹಕ್ಕುಗಳ ಸಾಕ್ಷರತೆ ಬಗ್ಗೆ ಸಮಾಜದ ಬೇರೆ ಬೇರೆ ಭಾಗಗಳಲ್ಲಿ ಪ್ರಸಾರ ಮಾಡುವುದು.

8) ಮಾನವ ಹಕ್ಕುಗಳ ಅಭಿವೃದ್ಧಿಗಾಗಿ ಅವಶ್ಯವೆನಿಸಿದ ಬೇರೆ ಇತರ ಕಾರ್ಯಗಳನ್ನು ಮಾಡತಕ್ಕದ್ದು.

9) ಮಾನವ ಹಕ್ಕುಗಳ ಸಂರಕ್ಷಣೆ ಹಾಗೂ ಸುರಕ್ಷತೆ ಬಗ್ಗೆ ತಿಳಿವಳಿಕೆ ಮಾಡಿಕೊಡುವುದು.

10) ಮಾನವ ಹಕ್ಕುಗಳ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಸಂಘ ಸಂಸ್ಥೆಗಳನ್ನು ಉತ್ತೇಜಿಸುವುದು.

